ಎಂಬ ಪ್ರಶ್ನೆಗೆ 2011ರ ಜನಗಣತಿಯ ಅನ್ವಯ ಚನ್ನಗಿರಿ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸಲು ಅರ್ಹವಿದ್ದು ಅದರಂತೆ ಕರ್ನಾಟಕ ಪೌರಸಭೆಗಳ ಕಾಯಿದೆ 1964 ಕಲಂ (3) ಹಾಗೂ 355 ಇ ಅನ್ವಯ ಕ್ರಮ ಜರುಗಿಸಲಾಗುತ್ತಿದೆ ಎನ್ನುವಂತಹ ಉತ್ತರ ಕೊಟ್ಟಿದ್ದಾರೆ. ನಾನು ಯಾವಾಗ ಎನ್ನುವಂತಹ ಪ್ರಶ್ನೆ ಕೇಳಿದ್ದೇನೆ. ದಯಮಾಡಿ ಯಾವಾಗ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ತಿಳಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಖಮರುಲ ಇಸ್ಲಾಂ: ಮಾನ್ಯ ಅಧ್ಯಕ್ಷರೆ, ಬುಧವಾರದ ದಿವಸ ಕ್ಯಾಬಿನೆಟ್‌ನಲ್ಲಿ ಚೆನ್ನಗಿರಿ ಅಪ್‌ಗ್ರೇಡ್ ಆಗಿದೆ. As per the rules, it will go to the Governor and they will call for objections. 100% ಆಗುತ್ತದೆ.

ಅಧ್ಯಕ್ಷರು: ಕೆ. ಶ್ರೀನಿವಾಸಮೂರ್ತಿ,

ಎಲೆಕ್ಟ್ರಿಕ್ ಸಂಬಳ ಬದಲಾವಣೆ

225 (2855); ಡಾ: ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ಮತಕ್ಷೇತ್ರ ವ್ಯಾಪ್ತಿಯ ಅನೇಕ ಗ್ರಾಮಗಳಲ್ಲಿ ಬಹಳ ವರ್ಷಗಳಿಂದ ತುಂಬ ಹಳೆಯದಾದ ವಿದ್ಯುಚ್ಛಕ್ತಿ ಕಬ್ಬಿಣದ ಕಂಬಗಳನ್ನು ಬದಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಆ ಗ್ರಾಮಗಳ ವಿವರ ನೀಡುವುದು;

ಇ) ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷತೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಹಳೆ ಕಂಬಗಳನ್ನು ಬದಲಾಯಿಸುವ ನಿರ್ಧಾರ ಸರ್ಕಾರದ ಹಂತದಲ್ಲಿ ಇದೆಯೇ; ಇದ್ದಲ್ಲಿ ಎಷ್ಟು ದಿನದಲ್ಲಿ ಬದಲಾಯಿಸಲಾಗುವುದು?

ಶ್ರೀ ಡಿ. ಕೆ. ಶಿವಕುಮಾರ್ (ಇಂದನ ಸಚಿವರು)

ಅ) ನೆಲಮಂಗಲ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಕೆಲವು ಗ್ರಾಮಗಳಲ್ಲಿ ಹಳೆಯ ಕಬ್ಬಿಣದ ಕಂಬಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳಲ್ಲಿ ಶಿಥಿಲಗೊಂಡ ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ಕಳೆದ 3 ವರ್ಷಗಳ ಅವಧಿಯಲ್ಲಿ ನೆಲಮಂಗಲ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಒಟ್ಟು ಶಿಥಿಲಗೊಂಡ ಹಳೆಯ ಕಬ್ಬಿಣದ ಕಂಬಗಳು ಬದಲಾಯಿಸಿದ ಕಬ್ಬಿಣದ ಕಂಬಗಳು ಮತ್ತು ಬದಲಾಯಿಸಲು ಬಾಕಿ ಉಳಿದ ಕಬ್ಬಿಣದ ಕಂಬಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ.

ಇ) **ಮತ್ತು (ಈ)** ರಾಜ್ಯದ ಎಲ್ಲಾ ವಿದ್ಯುತ್ ಸರಬರಾಜು ಕಂಪನಿಗಳಲ್ಲಿಯೂ ಶಿಥಿಲಗೊಂಡಿರುವ ಹಾಗೂ ಹಳೆಯದಾದ ವಿದ್ಯುತ್ ಕಂಬಗಳನ್ನು ಬದಲಾಯಿಸಲು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.

- ಪ್ರತಿ ವರ್ಷವೂ ಹಳೆಯ ಕಬ್ಬಿಣದ ಕಂಬಗಳನ್ನು ಬದಲಾಯಿಸುವ ಗುರಿಯನ್ನು ಇಟ್ಟುಕೊಂಡು ಕಾಮಗಾರಿಯನ್ನು ಕೈಗೆತ್ತಿಕೊಂಡು ಮೊದಲ ಆದ್ಯತೆಯ ಮೇರೆಗೆ ಬದಲಾಯಿಸಲಾಗುತ್ತಿದೆ.
- ಸಾರ್ವಜನಿಕ ಸ್ಥಳಗಳಲ್ಲಿ ಶಿಥಿಲಗೊಂಡ ಕಂಬಗಳನ್ನು ತುರ್ತಾಗಿ ಬದಲಾಯಿಸಲು ಕ್ರಮ ಕೈಗೊಳ್ಳಲಾಗಿದೆ.
- ಗುರುತಿಸಲಾಗಿರುವ ಶಿಥಿಲಗೊಂಡಿರುವ ಹಳೆಯ ಕಬ್ಬಿಣದ ಕಂಬಗಳನ್ನು ಮೂರು ತಿಂಗಳ ಒಳಗಾಗಿ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಮಾನ್ಯ ವಿಧಾನ ಸಭಾ ಸದಸ್ಯರಾದ ಡಾ: ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ) ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 2855 ಕ್ಕೆ ಅನುಬಂಧ:

ನೆಲಮಂಗಲ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಲ್ಲಿ ಒಟ್ಟು ಶಿಥಿಲಗೊಂಡ ಹಳೆಯ ಕಬ್ಬಿಣದ ಕಂಬಗಳು, ಬದಲಾಯಿಸಿದ ಕಬ್ಬಿಣದ ಕಂಬಗಳು ಮತ್ತು ಬದಲಾಯಿಸಲು ಬಾಕಿ ಉಳಿದ ಕಬ್ಬಿಣದ ಕಂಬಗಳ ವಿವರಗಳು ಈ ಕೆಳಕಂಡಂತಿವೆ:

2011–12

ಗ್ರಾಮಗಳ ಹೆಸರು	ಶಿಥಿಲಗೊಂಡ ಹಳೆಯ ಕಬ್ಬಿಣದ ಕಂಬಗಳ ಒಟ್ಟು ಸಂಖ್ಯೆ	ಬದಲಾಯಿಸಲಾದ ಶಿಥಿಲಗೊಂಡ ಹಳೆಯ ಕಬ್ಬಿಣದ ಕಂಬಗಳ ಸಂಖ್ಯೆ	ಬದಲಾಯಿಸಲು ಬಾಕಿ ಇರುವ ಕಬ್ಬಿಣದ ಕಂಬಗಳ ಸಂಖ್ಯೆ
ತೋಟದ ಗುಡ್ಡಹಳ್ಳಿ	1	1	–
ವಿ. ವಿ. ಪುರ	4	2	2
ಬೆಟ್ಟನಹಳ್ಳಿ	3	3	–
ಎಸ್.ಬಿ.ಎಂ.ರಸ್ತೆ	3	1	2
ಮಾರುತಿ ಬಡಾವಣೆ	5	1	4
ಶಿವಗಂಗೆ	10	10	–
ಮರಿಯಕ್ಕನ ದೇವಸ್ಥಾನ	1	1	–
ಶಿವಗಂಗೆ	1	–	1
ಹೊಸಹಳ್ಳಿ	2	1	1

ಗುರುವನಹಳ್ಳಿ	4	3	1
ಲಕ್ಷ್ಮಿಪುರ	8	5	3
ಮುದ್ದನಹಳ್ಳಿ	1	1	–
ತಿಪ್ಪಗೊಂಡನಹಳ್ಳಿ	3	2	1
ಜಕ್ಕಸಂದ್ರ	4	3	1
ಹೊನ್ನಸಂದ್ರ	9	8	1
ಕೊಲ್ಲಿನಹಳ್ಳಿ	9	9	–
ದಾದಾಫೀರ್ ಲೇಔಟ್	3	1	2
ಸುಭಾಷ್ ನಗರ	4	3	1
ಗಂಗೋಡನಹಳ್ಳಿ	5	3	2
ಆಲೂರು ಗ್ರಾಮ	3	1	2
ಬಸವನಹಳ್ಳಿ	3	2	1
ಮಾದನಾಯಕನಹಳ್ಳಿ	6	5	1
ಕುದುರೆಗೆರೆ	12	6	6
ಕುಣಿಗಲ್ ಬೈಪಾಸ್	2	2	–
ಒಟ್ಟು	106	74	32

2012–13

ಗ್ರಾಮಗಳ ಹೆಸರು	ಶಿಥಿಲಗೊಂಡ ಹಳೆಯ ಕಬ್ಬಿಣದ ಕಂಬಗಳ ಒಟ್ಟು ಸಂಖ್ಯೆ	ಬದಲಾಯಿಸಲಾದ ಶಿಥಿಲಗೊಂಡ ಹಳೆಯ ಕಬ್ಬಿಣದ ಕಂಬಗಳ ಸಂಖ್ಯೆ	ಬದಲಾಯಿಸಲು ಬಾಕಿ ಇರುವ ಕಬ್ಬಿಣದ ಕಂಬಗಳ ಸಂಖ್ಯೆ
ವಿ. ವಿ. ಪುರ	2	2	–
ಎಸ್.ಬಿ.ಎಂ. ರಸ್ತೆ	2	1	1
ಮಾರುತಿ ಬಡಾವಣೆ	4	3	1
ಶಿವಗಂಗೆ	1	1	–
ಹೊಸಹಳ್ಳಿ	1	1	–
ಗುರುವನಹಳ್ಳಿ	1	1	–
ಲಕ್ಷ್ಮೀಪುರ	3	2	1
ತಿಪ್ಪಗೊಂಡನಹಳ್ಳಿ	1	1	–
ಜಕ್ಕಸಂದ್ರ	1	1	–
ಹೊನ್ನಸಂದ್ರ	1	1	–
ದಾದಾಫೀರ್ ಲೇಔಟ್	2	1	1
ಸುಭಾಷ್ ನಗರ	3	2	1
ಗಂಗೋಡನಹಳ್ಳಿ	2	2	–
ಆಲೂರು ಗ್ರಾಮ	2	1	1

ಬಸವನಹಳ್ಳಿ	1	1	–
ಮಾದನಾಯಕನಹಳ್ಳಿ	1	1	–
ಕುದುರೆಗೆರೆ	6	6	–
ಜಕ್ಕನಹಳ್ಳಿ	2	2	–
ಅರದಿ ಮರದ ಪಾಳ್ಯ	3	2	1
ಓಬಳಪುರ	4	2	2
ಜಯನಗರ	3	2	1
ಉರುಳಹಳ್ಳಿ	4	2	2
ಕೆಂಗನಹಳ್ಳಿ	2	2	–
ಒಟ್ಟು	52	40	12

2013–14

ಗ್ರಾಮಗಳ ಹೆಸರು	ಶಿಥಿಲಗೊಂಡ ಹಳೆಯ ಕಬ್ಬಿಣದ ಕಂಬಗಳ ಒಟ್ಟು ಸಂಖ್ಯೆ	ಬದಲಾಯಿಸಲಾದ ಶಿಥಿಲಗೊಂಡ ಹಳೆಯ ಕಬ್ಬಿಣದ ಕಂಬಗಳ ಸಂಖ್ಯೆ	ಬದಲಾಯಿಸಲು ಬಾಕಿ ಇರುವ ಕಬ್ಬಿಣದ ಕಂಬಗಳ ಸಂಖ್ಯೆ
ಎಸ್.ಬಿ.ಎಂ. ರಸ್ತೆ	1	1	–
ಮಾರುತಿ ಬಡಾವಣೆ	1	1	–
ಲಕ್ಷ್ಮೀಪುರ	1	1	–

ದಾದಾಫೀರ್ ಲೇಔಟ್	1	1	–
ಸುಭಾಷ್ ನಗರ	2	1	1
ಆಲೂರು ಗ್ರಾಮ	1	1	–
ಅರದಿ ಮರದ ಪಾಳ್ಯ	1	1	–
ಓಬಳಪುರ	2	–	2
ಜಯನಗರ	3	1	2
ಉರುಳಹಳ್ಳಿ	2	2	–
ದೊಡ್ಡಬೆಲೆ	2	–	2
ಕುಲುವನಹಳ್ಳಿ	2	1	1
ಮಹಿಮಾಪುರ	2	1	1
ಕಂಬಾಳು	7	2	5
ಮಾರಗೊಂಡನಹಳ್ಳಿ	2	1	1
ತ್ಯಾಮಗೊಂಡ್ಲು	6	2	4
ಕಸಬಾನಿಜಗಲ್	2	1	1
ಬರಗೇನಹಳ್ಳಿ	2	1	1
ಒಟ್ಟು	**40**	**19**	**21**

ಡಾ: ಕೆ. ಶ್ರೀನಿವಾಸಮೂರ್ತಿ: ಮಾನ್ಯ ಅಧ್ಯಕ್ಷರೆ, ನನ್ನ ಮತ ಕ್ಷೇತ್ರದಲ್ಲಿ ಶಿಥಿಲಗೊಂಡಿರತಕ್ಕಂಥ ಕಬ್ಬಿಣದ electric poles ಸುಮಾರು 15 ರಿಂದ 20

ಹಳ್ಳಿಗಳಲ್ಲಿ ಹಳೆಯದಾಗಿರುವುದರಿಂದ ರೈತರಿಗೆ ಬಹಳ ತೊಂದರೆಯಾಗುತ್ತಿದೆ. ನಾನು ಪದೇ ಪದೇ Executive Engineer ಮತ್ತು AEE ಗಳಿಗೆ ಹೇಳಿದರೂ ಕೂಡ ಬದಲಾವಣೆ ಮಾಡಿಲ್ಲ.

ಅಧ್ಯಕ್ಷರು: ಈಗ ಏನು ಮಾಡಬೇಕೆಂದು ಹೇಳಿ. ಮಾಡುತ್ತೇವೆಂದು ಹೇಳುತ್ತಿದ್ದಾರಲ್ಲ.

ಡಾ: ಕೆ. ಶ್ರೀನಿವಾಸಮೂರ್ತಿ: ಇನ್ನೂ ಹೇಳಿಲ್ಲ ಅಧ್ಯಕ್ಷರೆ,

ಅಧ್ಯಕ್ಷರು: ಇಲ್ಲಿ ಇದೆಯಲ್ಲ ಇದು ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳಲ್ಲಿ ಶಿಥಿಲಗೊಂಡ ಕಬ್ಬಿಣದ ಕಂಬಗಳನ್ನು ಬದಲಾವಣೆ ಮಾಡುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಶ್ರೀ ಡಿ. ಕೆ. ಶಿವಕುಮಾರ್: ಎಷ್ಟು ದಿವಸಗಳಲ್ಲಿ ಆಗಬೇಕು ಹೇಳಿ, ಆದಷ್ಟು ಬೇಗ ಎಂದರೆ ಎಷ್ಟು ದಿವಸಗಳಲ್ಲಿ ಆಗಬೇಕು?

ಡಾ: ಕೆ. ಶ್ರೀನಿವಾಸಮೂರ್ತಿ: 15 ದಿವಸಗಳಲ್ಲಿ ಮಾಡಿ ಕೊಡಿ.

ಶ್ರೀ ಡಿ. ಕೆ. ಶಿವಕುಮಾರ್: ಒಂದೆರಡು ತಿಂಗಳುಗಳಲ್ಲಿ ಮಾಡಿ ಕೊಡುತ್ತೇನೆ.

ಅಧ್ಯಕ್ಷರು: ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀಮತಿ ಶಾರದ ಪೂರ್ಯನಾಯಕ್: ನನ್ನದು ಒಂದು ಪ್ರಶ್ನೆ ಇತ್ತು.

ಅಧ್ಯಕ್ಷರು: No Question. ಎರಡು ಸಾರಿ ಕೂಗಿ ಆಯಿತು. ನೀರು ಇರಲಿಲ್ಲ. ಆಗಿ ಹೋಯಿತು.

ಆ. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಟಿ. ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ದಿನಾಂಕ: 11.07.2014ರ ಹದಿನೈದನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 230 ಪ್ರಶ್ನೆಗಳ ಪೈಕಿ 145 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.